## I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ

O.S.No.1135/17

PW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 06-06-2019.**

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರು ಶ್ರೀ . ಎಂ.ಎಂ.ಎಸ್.**

1. ದಾವಾ ಆಸ್ತಿಗೆ ಸಂಬಂಧಿಸಿದ 2014-15 ನೇ ಸಾಲಿನ ಮತ್ತು 2018-19 ನೇ ಸಾಲಿನ 2 ಅಸೆಸ್ಮೆಂಟ್ ಎಕ್ಸಟ್ರಾಕ್ಟಗಳನ್ನು ಹಾಜರಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 1 ಎ ಎಂದು ಗುರುತಿಸಲಾಯಿತು.
2. ಹಿಂಡಲಗಾ ಗ್ರಾಮ ಪಂಚಾಯತಿಯ ದಿಃ 03-04-2013, 20-08-2014, 04-02-2016 ಮತ್ತು ದಿಃ20-09-2017 ರಂದು ದಾವಾ ಆಸ್ತಿಗೆ ಸಂಬಂಧಿಸಿದ ತೆರಿಗೆಯನ್ನು ಪಾವತಿಸಿದ್ದು ಮತ್ತು ಅವುಗಳ ರಶೀದಿಯನ್ನು ಕ್ರಮವಾಗಿ ನಿಪಿ-2 ರಿಂದ 5 ಎಂದು ಗುರುತಿಸಲಾಯಿತು.
3. ದಿಃ10-07-2017 ರಂದು ಹಿಂಡಲಗಾ ಗ್ರಾಮ ಪಂಚಾಯತಿಯವರು

ಹೊರಡಿಸಿದ ರೆಸಲೂಶನ್ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

4. ಹಿಂಡಲಗಾ ಗ್ರಾಮ ಪಂಚಾಯತಿಯವರು ದಾವಾ ಆಸ್ತಿಗೆ ಸಂಬಂಧಿಸಿದ ನೀಲಿ ನಕ್ಷೆಯನ್ನು ಹಾಜರು ಪಡಿಸಿರುತ್ತೇನೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿಪತು.

5. ಹಿಂಡಲಗಾ ಗ್ರಾಮ ಪಂಚಾಯತಿಯವರು ದಿಃ20-08-2014 ರಂದು ದಾವಾ ಆಸ್ತಿಗೆ ಕುರಿತು ನೀಡಿದ ನೋ-ಆಬ್ಜೆಕ್ಷನ್ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

6. ದಿಃ28-10-2017 ರಂದು ನನ್ನ ಸ್ನೇಹಿತನಾದ ಅಮಿತ್ ಮಿತಾರಿ ಅವರು ಕ್ಯಾಂಪ್ ಪೋಲೀಸ್ ಠಾಣೆಗೆ ನೀಡಿದ ಪ್ರ.ವ.ವರದಿಯ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

7. ದಿಃ11-12-2017 ರಂದು ಹೆಸ್ಕಾಂನ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹೆಸ್ಕಾಂರವರು ನೀಡಿದ ವಿದ್ಯುತ್ ಬಿಲ್ಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

8. ದಿಃ11-12-2017 ರಂದು ಹೆಸ್ಕಾಂರರು ದಾವಾ ಆಸಸ್ತಿಗೆ ಸಂಬಂಧಿಸಿದಂತೆ ವಿದ್ಯುತ್ ಸಂಪರ್ಕವನ್ನು ನೀಡಲು ಅನುಮತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಸದರಿ ಅನುಮತಿಗೆ ನಾನು ರೂ.3,600-00 ಗಳನ್ನು ತೇವಣಿ ಮಾಡಿದ ರಶೀದಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿಯಿದೆ.**

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ